ಪ್ರಜಾವಾಣಿ

ಸಂಗತ

# ಕೇಂದ್ರದಿಂದಲೇ 'ಸುಪ್ರೀಂ' ಆದೇಶದ ಅಣಕ!

ಹದಿನಾರು ವರ್ಷಗಳಿಂದ ವನ್ಯಜೀವಿ ಮತ್ತು ಅರಣ್ಯ ಸಂರಕ್ಷಣೆಯ ಕುರಿತಾದ ಎರಡು ಪ್ರಮುಖ ಮೊಕದ್ದಮೆಗಳನ್ನು ಸುಪ್ರೀಂಕೋರ್ಟ್ ವಿಚಾರಣೆ ನಡೆಸುತ್ತಿದೆ. ಇದರಲ್ಲಿ ಮೊದಲನೆಯದು ಡಬ್ಲ್ಯೂಡಬ್ಲ್ಯೂಎಫ್‌ನ ಅಂಗವಾದ ಪರಿಸರ ಕಾನೂನು ಕೇಂದ್ರ ಸಲ್ಲಿಸಿರುವ ವನ್ಯಜೀವಿಧಾಮಗಳ ಕುರಿತಾದ ರಿಟ್, ಎರಡನೆಯದು ಗೋದಾವರ್ಮನ್ ಮೊಕದ್ದಮೆ ಎಂದೇ ಪ್ರಖ್ಯಾತವಾಗಿರುವ ಅರಣ್ಯಗಳಿಗೆ ಸಂಬಂಧಿಸಿದ ರಿಟ್ ಅರ್ಜಿ. ಸುಪ್ರೀಂ ಕೋರ್ಟ್‌ನ ಈ ಆದೇಶಗಳನ್ನು ಬದಿಗಿರಿಸಿ ದೂರಗಾಮಿ ಪರಿಣಾಮ ಬೀರುವ ಆದೇಶಗಳ ಸರಮಾಲೆಯನ್ನು ಕೇಂದ್ರ ಸರ್ಕಾರ ಹೊರಡಿಸುತ್ತಿದೆ.

ಆದಿವಾಸಿ ಸಚಿವಾಲಯದ ಮೇ 2011ರ ವರದಿಯಲ್ಲಿ 14 ಲಕ್ಷ ಹೆಕ್ಟೇರ್ ಅರಣ್ಯ ಪ್ರದೇಶವನ್ನು ಅನುಸೂಚಿತ ಆದಿವಾಸಿ ಹಾಗೂ ಇತರೆ ಸಾಂಪ್ರದಾಯಿಕ ಅರಣ್ಯವಾಸಿಗಳ (ಹಕ್ಕು ಗುರುತಿಸುವ) ಕಾಯ್ದೆ-2006ರ ಅಡಿಯಲ್ಲಿ ಫಲಾನುಭವಿಗಳಿಗೆ ಹಸ್ತಾಂತರಿಸಿರುವುದನ್ನು ತೋರಿಸಿದೆ. ಅಂದರೆ ಹೀಗೆ ಹಸ್ತಾಂತರಿಸಲಾದ ಅರಣ್ಯ ಪ್ರದೇಶ ದೆಹಲಿಯ ವಿಸ್ತೀರ್ಣಕ್ಕಿಂತ ಸುಮಾರು ಹತ್ತು ಪಟ್ಟು. ಭಾರತೀಯ ಅರಣ್ಯ ಸರ್ವೇಕ್ಷಣಾ ಸಂಸ್ಥೆಯು ದೇಶದ ಹಸಿರು ಹೊದಿಕೆ ಕುರಿತ ದ್ವೈವಾರ್ಷಿಕ ವರದಿಯಾದ 'ಅರಣ್ಯ ಸ್ಥಿತಿ ವರದಿ - 2011' ಯನ್ನು ಡಿಸೆಂಬರ್ 7, 2011ರಂದು ಬಿಡುಗಡೆಮಾಡಿದೆ. ರಾಷ್ಟ್ರದ 188 ಆದಿವಾಸಿ ಜಿಲ್ಲೆಗಳಲ್ಲಿ 2009ರಿಂದ 2011ರ ನಡುವೆ 67,900 ಹೆಕ್ಟೇರ್ ಅರಣ್ಯ ಕಳೆದುಕೊಂಡಿರುವುದನ್ನು ಈ ವರದಿ ದಾಖಲಿಸಿದೆ. ಆದರೆ ಈ ವರದಿ ಈ ಬೃಹತ್ ಪ್ರಮಾಣದ ಅರಣ್ಯ ನಾಶ ಅರಣ್ಯ ಹಕ್ಕುಗಳ ಕಾಯ್ದೆಯಡಿ ಹಕ್ಕುಪತ್ರಗಳನ್ನು ದೊಡ್ಡ ಪ್ರಮಾಣದಲ್ಲಿ ನೀಡಿದ್ದರಿಂದಲೇ ಆಯಿತೇ ಎಂಬುದರ ಕುರಿತಾಗಿ ಸ್ಪಷ್ಟನೆ ನೀಡುವುದಿಲ್ಲ. ಅರಣ್ಯ ಹಕ್ಕುಗಳ ಕಾಯ್ದೆಯ ಸುತ್ತೋಲೆ ಹಾಗೂ ನಿರ್ದೇಶನಗಳನ್ನು ಅತಿಬುದ್ಧಿವಂತಿಕೆಯಿಂದ ಅರ್ಥೈಸುವುದರ ಮೂಲಕ ಕೇಂದ್ರ ಸರ್ಕಾರ ಸುಪ್ರೀಂಕೋರ್ಟ್‌ನ ಕಾಲಕೆಳಗಿನ ಕಂಬಳಿಯನ್ನು ವ್ಯವಸ್ಥಿತವಾಗಿ ಎಳೆಯುತ್ತಿದೆ.

ಸುಪ್ರೀಂಕೋರ್ಟ್ ನವೆಂಬರ್ 13, 2000 ರಂದು ಮಧ್ಯಂತರ ಆದೇಶದ ಮೂಲಕ ವನ್ಯಜೀವಿಧಾಮಗಳ ಮರುವರ್ಗೀಕರಣವನ್ನು ನಿಷೇಧಿಸಿತು. ಅಲ್ಲದೆ ಆಗಸ್ಟ್ 29, 2006ರಂದು ಆದೇಶವೊಂದನ್ನು ಹೊರಡಿಸಿ, ವನ್ಯಜೀವಿಧಾಮಗಳ ಒಳಗಿನ ಅರಣ್ಯ ಹಕ್ಕುಗಳನ್ನು ಗುರುತಿಸಿ, ಇತ್ಯರ್ಥಪಡಿಸಲು ಕೊನೆಯ ಅವಕಾಶವನ್ನು ರಾಜ್ಯಗಳಿಗೆ ನೀಡಿತು. ಆದರೆ ಸರ್ಕಾರ ಯಾವುದೇ ಹಕ್ಕುಗಳನ್ನು ಇತ್ಯರ್ಥಪಡಿಸದೆಯೇ ಅರಣ್ಯ ಹಕ್ಕುಗಳ ಕಾಯ್ದೆ ಜಾರಿಯ ಮೂಲಕ ವನ್ಯಜೀವಿಧಾಮಗಳ ಒಳಗೆ ದೊಡ್ಡ ಪ್ರಮಾಣದ ಅರಣ್ಯ ಪ್ರದೇಶಗಳನ್ನು ಹಂಚುತ್ತಿದೆ.

ವಿವಾದಾಸ್ಪದವಾದ ಅರಣ್ಯ ಹಕ್ಕು ಕಾಯ್ದೆಯ ಒಂದು ಸಮರ್ಥನೀಯ ಪರಿಚ್ಛೇದ, ವನ್ಯಜೀವಿಧಾಮಗಳ ಒಳಗೆ ವೈಜ್ಞಾನಿಕವಾಗಿ ಗುರುತಿಸಲ್ಪಟ್ಟ ಸೂಕ್ಷ್ಮ ವನ್ಯಜೀವಿ ತಾಣಗಳಿಂದ ಜನರನ್ನು ಸ್ಥಳಾಂತರಿಸಲು ಅನುವು ಮಾಡಿಕೊಡುತ್ತದೆ. ಮುಖ್ಯವಾದ ವನ್ಯಜೀವಿ ತಾಣಗಳಲ್ಲೂ ಅರಣ್ಯ ಪ್ರದೇಶದ ಹಕ್ಕುಗಳನ್ನು ವಿತರಿಸುವ ಕಾರ್ಯ ಭರದಿಂದ ಸಾಗಿದ್ದು ಒಂದೇ ಒಂದು ಸೂಕ್ಷ್ಮ ವನ್ಯಜೀವಿ ಆವಾಸವನ್ನು ಸಹ ಇನ್ನು ಗುರುತಿಸಲಾಗಿಲ್ಲ. ಸೂಕ್ಷ್ಮ ವನ್ಯಜೀವಿ ತಾಣಗಳನ್ನು ರಚಿಸಲು ನ್ಯೂನತೆಗಳೇ ಬಂಡವಾಳವಾಗಿರುವ ನಿರ್ದೇಶನ ಸೂತ್ರಗಳು ಇನ್ನೇನು ಜಾರಿಯಾಗಲಿದೆ. ಈ ನಿರ್ದೇಶನ ಸೂತ್ರಗಳು ಜಾರಿಯಾದಲ್ಲಿ ಬಹುಶಃ ದೇಶದಲ್ಲಿ ಒಂದೇ ಒಂದು ಸೂಕ್ಷ್ಮ ವನ್ಯಜೀವಿ ಆವಾಸವೂ ಉಳಿಯದು.

ಎರಡನೆಯದು, ಸುಪ್ರೀಂಕೋರ್ಟ್ ಗೋದಾವರ್ಮನ್ ಮೊಕದ್ದಮೆಗೆ ಸಂಬಂಧಿಸಿದಂತೆ ಹೊರಡಿಸಿದ ಅತಿಮುಖ್ಯವಾದ ಆದೇಶದಲ್ಲಿ ವನ್ಯಜೀವಿಧಾಮಗಳಿಂದ ಸತ್ತ, ಸಾಯುತ್ತಿರುವ ಹಾಗೂ ಗಾಳಿಗೆ ಧರೆಗುರುಳಿದ ಮರಗಳನ್ನು (ಹುಲ್ಲೂ ಸೇರಿದಂತೆ) ತೆರವುಗೊಳಿಸದಂತೆ ಪ್ರತಿಬಂಧಿಸಿತು. ಕೇಂದ್ರ ಅಧಿಕಾರಯುಕ್ತ ಸಮಿತಿಯ ಶಿಫಾರಸುಗಳೂ ಸೇರಿದಂತೆ ವಿವಿಧ ಕೋರಿಕೆಗಳನ್ನು ಆಲಿಸಿದ ನಂತರವೂ ಸುಪ್ರೀಂಕೋರ್ಟ್ ನವೆಂಬರ್ 25, 2005ರಂದು ತನ್ನ ಹಿಂದಿನ ಆದೇಶವನ್ನು ಬದಲಿಸಲು ನಿರಾಕರಿಸಿತು. ಅಷ್ಟೇ ಅಲ್ಲದೆ ತನ್ನ ಅನುಮತಿಯಿಲ್ಲದೆ ವನ್ಯಜೀವಿಧಾಮಗಳಲ್ಲಿ ಯಾವುದೇ ವಾಣಿಜ್ಯ ಉದ್ದೇಶದ ಚಟುವಟಿಕೆಗಳು ನಡೆಯುವಂತಿಲ್ಲ ಎಂದು ಸ್ಪಷ್ಟನೆಯನ್ನೂ ನೀಡಿತು. ಅದೇನೇ ಇದ್ದರೂ, ಬಿದಿರೂ ಸೇರಿದಂತೆ ಕಿರು ಅರಣ್ಯ ಉತ್ಪನ್ನಗಳನ್ನು ವನ್ಯಜೀವಿಧಾಮಗಳಲ್ಲಿ ವಾಣಿಜ್ಯ ಉದ್ದೇಶಗಳಿಗಾಗಿ ಸಂಗ್ರಹಿಸಲು ಅರಣ್ಯ ಹಕ್ಕು ಕಾಯ್ದೆಯಡಿ ಅನುಮತಿ ನೀಡಲಾಗುತ್ತಿದೆ. ಇದು ಸುಪ್ರೀಂಕೋರ್ಟ್ ಆದೇಶದ ಸ್ಪಷ್ಟವಾದ ಅಣಕ.

ಮೂರನೆಯದು, ಸುಪ್ರೀಂಕೋರ್ಟ್ ನವೆಂಬರ್ 23, 2001ರ ಆದೇಶದ ಮೂಲಕ 1980ರ ನಂತರದ ಅರಣ್ಯ ಒತ್ತುವರಿಗಳನ್ನು ಸಕ್ರಮಗೊಳಿಸದಂತೆ ನಿರ್ದೇಶಿಸಿತು. ಆದರೆ ಕೇಂದ್ರ ಸರಕಾರ ಅರಣ್ಯ ಹಕ್ಕು ಕಾಯ್ದೆಯ ಮೂಲಕ ಆದಿವಾಸಿಗಳಿಗಾಗಿರುವ ಅನ್ಯಾಯವನ್ನು ಸರಿಪಡಿಸುವ ಪ್ರಯತ್ನ ಎಂಬ ನೆಪವೊಡ್ಡಿ ಅರಣ್ಯ ಹಕ್ಕುಗಳ ನಿಗದಿಗೆ ಗಡಿ ದಿನಾಂಕವನ್ನು ಅಕ್ಟೋಬರ್ 1980ರಿಂದ ಡಿಸೆಂಬರ್ 2005ಕ್ಕೆ ಬದಲಿಸಿತು. ಅಷ್ಟಕ್ಕೆ ಸುಮ್ಮನಾಗದೆ ಜೂನ್ 9, 2008ರ ಸುತ್ತೋಲೆಯ ಮೂಲಕ ಆದಿವಾಸಿ ಸಚಿವಾಲಯ 'ಮೂಲತಃ ನೆಲೆಸಿರುವ' ಎಂಬ ಪದದ ವ್ಯಾಪ್ತಿಯನ್ನು ವಿಸ್ತರಿಸಿ ಅರಣ್ಯವಾಸಿಗಳಲ್ಲದವರಿಗೂ ಅರಣ್ಯವನ್ನು ಕಬಳಿಸಲು ಮುಕ್ತ ಆಮಂತ್ರಣ ನೀಡಿದೆ!

ಇಂತಹ ಪುನರಾವರ್ತಿತ ಒತ್ತುವರಿ ಸಕ್ರಮವು ದೊಡ್ಡ ಪ್ರಮಾಣದಲ್ಲಿ ಅರಣ್ಯ ನಾಶಕ್ಕೆ ಕಾರಣವಾಗಿದೆ. ಇದು ಅರಣ್ಯ ಸಂರಕ್ಷಣೆಯಲ್ಲಿರುವ ಅರಣ್ಯಾಧಿಕಾರಿಗಳನ್ನು ವಿಚಲಿತಗೊಳಿಸುವ ಜೊತೆಗೆ, ಹೊಸ ಒತ್ತುವರಿಗೆ ನಾಂದಿ ಹಾಡುತ್ತಿದೆ. ಒತ್ತುವರಿ ಮಾಡಿಕೊಂಡಿರುವ ಅರಣ್ಯವನ್ನು ಸಕ್ರಮಗೊಳಿಸುವುದು, ಜಮೀನುರಹಿತ, ಹಕ್ಕುಗಳಿರದ ಅರಣ್ಯವಾಸಿಗಳಿಗೆ ನ್ಯಾಯಬದ್ಧವಾದ ಭೂಸುಧಾರಣೆಯನ್ನು ಜಾರಿಗೆ ತರುವುದಕ್ಕಿಂತಲೂ ಸುಲಭವಾದ ರಾಜಕೀಯ ಪರಿಹಾರ.

ಇನ್ನೂ ಹೆಚ್ಚಿನ ಕಳವಳಕ್ಕೆ ಕಾರಣವಾಗುವ ಅಂಶವೆಂದರೆ, ಈಗ ಪರಭಾರೆಮಾಡಲಾದ ಮತ್ತು ಸಮುದಾಯಿಕ ಹಕ್ಕುಳ್ಳ ಎಂದು ಪ್ರತ್ಯೇಕಗೊಳಿಸಲಾಗುತ್ತಿರುವ ಪ್ರದೇಶಗಳು ರಾಷ್ಟ್ರದ ಅತ್ಯುತ್ತಮ ವನ್ಯಜೀವಿ ತಾಣಗಳ ನಡುವೆ ಇದ್ದು, ಪುನರ್‌ಸೃಷ್ಟಿಸಲಾಗದ ವನ್ಯಜೀವಿ ಆವಾಸಗಳ ಛಿದ್ರೀಕರಣಕ್ಕೆ ದಾರಿಯಾಗಿವೆ. ಆದಿವಾಸಿ ಸಚಿವಾಲಯವೇ ಆರಿಸಿದ ಜೀವವೈವಿಧ್ಯದ ತಜ್ಞರನ್ನು ಒಳಗೊಂಡ ಅರಣ್ಯ ಹಕ್ಕುಕಾಯ್ದೆ ಜಾರಿ ಪರಿಶೀಲನಾ ಸಮಿತಿಯು (ಸಕ್ಸೇನ ಸಮಿತಿ) ತನ್ನ ಆದರ್ಶದ ಜೂಜನ್ನೇ ಬಲಪಡಿಸುತ್ತ, ವನ್ಯಜೀವಿಧಾಮಗಳಲ್ಲಿ ಸಹ ಇಂತಹ ಹಕ್ಕು ನೀಡುವುದರಿಂದ ಯಾವುದೇ ಕೆಟ್ಟ ಪರಿಣಾಮ ಇಲ್ಲ ಎಂದೇ ವಾದಿಸುತ್ತಿದೆ.

ಅಳಿವಿನಂಚಿನಲ್ಲಿರುವ ಪ್ರಭೇದಗಳಿಗೆ ಆವಾಸ ಛಿದ್ರೀಕರಣವೇ ಅತಿದೊಡ್ಡ ಕುತ್ತು ಎಂಬ ಮೂರು ದಶಕಗಳ ದೃಢೀಕೃತ ವೈಜ್ಞಾನಿಕ ಸಂಶೋಧನೆಯ ಸಾರ.

ಪರಿಸರಕ್ಕೆ ಸಂಬಂಧಿಸಿದ ಪರಿಣಾಮಗಳು ಒಂದು ಕಡೆಯಿರಲಿ, ಇಂತಹ ಪರಭಾರೆ ಮಾಡಲಾಗದಂತಹ ಕಾಡಿನ ಒಳ ಪ್ರದೇಶಗಳು ನೇರವಾಗಿ ಗಣಿಧಣಿಗಳ, ಮರಗಳ್ಳರ, ಎಕೋ-ಟೂರಿಸಂ ಸೋಗಿನ ರೆಸಾರ್ಟ್‌ಗಳ ಪಾಲಾಗುತ್ತದೆ. ಆದಿವಾಸಿಗಳು ದುರ್ಭಿಕ್ಷ ಸ್ಥಿತಿಗೆ ಬರುತ್ತಾರೆ. ಹೀಗೆಂದ ಮಾತ್ರಕ್ಕೆ, ಈ ವಾದ ವನ್ಯಜೀವಿಧಾಮ ಹಾಗೂ ದಟ್ಟ ಅರಣ್ಯ ಭಾಗಗಳಲ್ಲಿ ವಾಸಿಸುತ್ತಿರುವ ನೈಜ ಆದಿವಾಸಿಗಳ ಆಶೋತ್ತರಗಳನ್ನು ಕಡೆಗಣಿಸುವುದಕ್ಕಲ್ಲ. ಅವರಿಗೆ ಸೂಕ್ತ, ಪುನರ್ವಸತಿ ಸೌಕರ್ಯಗಳನ್ನು, ಜೀವನೋಪಾಯ ವ್ಯವಸ್ಥೆಗಳನ್ನು, ಕರ್ನಾಟಕದಲ್ಲಿ ಈಗಾಗಲೇ ಯಶಸ್ವಿಯಾಗಿ ಜಾರಿಯಾಗಿರುವ ಸ್ವಯಂಪ್ರೇರಿತ ಪುನರ್ವಸತಿ ಯೋಜನೆಗಳ ಮಾದರಿಯಲ್ಲಿ ವನ್ಯಜೀವಿಧಾಮಗಳ ಹಾಗೂ ಪ್ರಮುಖ ಆವಾಸಗಳ ಹೊರಗೆ ಒದಗಿಸಬೇಕು. ಇದು ನಿಜವಾಗಿ ಆದಿವಾಸಿಗಳು ನಿರೀಕ್ಷಿಸುವ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯನ್ನು ತಂದುಕೊಡುವುದು ಮಾತ್ರವಲ್ಲದೆ, ಅಣೆಕಟ್ಟು, ರಸ್ತೆ, ಇತ್ಯಾದಿಗಳಿಂದ ಸಮೃದ್ಧ ಕಾಡುಗಳು ಛಿದ್ರೀಕರಣವಾಗುವುದನ್ನು ತಪ್ಪಿಸುತ್ತದೆ.

ಸುಪ್ರೀಂಕೋರ್ಟ್ ತುರ್ತಾಗಿ ಮಧ್ಯಪ್ರವೇಶಿಸಿ ಕಡಿವಾಣವಿಲ್ಲದ ಅರಣ್ಯ ಹಕ್ಕು ವಿತರಣೆಯನ್ನು, ವನ್ಯಜೀವಿಧಾಮಗಳ ನಡುವೆಯೂ ನಡೆಯುತ್ತಿರುವ ಮಾರುಕಟ್ಟೆಯ ಬೇಡಿಕೆಯಾಧರಿಸಿದ ವಾಣಿಜ್ಯಿಕ ಕಾಡುಉತ್ಪನ್ನಗಳ ಸಂಗ್ರಹವನ್ನು ಪರಾಮರ್ಶನೆಗೆ ಒಳಪಡಿಸದಿದ್ದಲ್ಲಿ ಭಾರತದ ಅರಣ್ಯ ಹಾಗೂ ವನ್ಯಜೀವಿಗಳು ತೀವ್ರ ಗಂಡಾಂತರಕ್ಕೆ ಸಿಲುಕಲಿದೆ.

**ಪ್ರವೀಣ್ ಭಾರ್ಗವ್**
ರಾಷ್ಟ್ರೀಯ ವನ್ಯಜೀವಿ ಮಂಡಲಿಯ ಮಾಜಿ ಸದಸ್ಯ
ಹಾಗೂ ವೈಲ್ಡ್‌ಲೈಫ್ ಫಸ್ಟ್‌ನ ಟ್ರಸ್ಟಿ